ನಾನವನನ್ನು ನೋಡಬಹುದಿತ್ತಲ್ಲವೆ?

ಇವೆಲ್ಲ ಈಗಿನ ಪ್ರಶ್ನೆಗಳು. ಆದರೆ ಆಗ ಅವಕ್ಕೆ ನನ್ನ ಬಳಿ ಉತ್ತರವಿರಲಿಲ್ಲ. ನನಗೆ ಗೊತ್ತಿದ್ದುದೆಲ್ಲ – ನೊಂದಿದ್ದ ಭಯಾನಕ ಅನುಭವಗಳನ್ನು ಹಾದುಬಂದಿದ್ದ ಈ ಸುನಯನಳ ಜೀವಕ್ಕೆ ಆಸರೆಯಾಗಿ ಸರ್ವದಮನ ಬೇಕಿತ್ತೆಂಬುದಷ್ಟೇ. ಅವನಿಲ್ಲವೆಂದಾಗ ಹೌಹಾರಿದೆ. ತತ್ತರಿಸಿದೆ. ಹುಚ್ಚಿಯಂತಾಗಿ ಪ್ರೀತಿಗಾಗಿ ಹಂಬಲಿಸತೊಡಗಿದೆ. ಅದೂ– ನನಗಿಷ್ಟವಾಗುವ ಪ್ರೀತಿ. ಎಷ್ಟೆಲ್ಲ ಸುಖ–ಸಂತೋಷ, ನೆಮ್ಮದಿ ನೀಡುವ ವಸ್ತು ಎದುರಿದ್ದು ಕಾಲಲ್ಲಿ ಬಿದ್ದು ಒದ್ದಾಡುತ್ತಿದ್ದರೂ ಸರಳ ಹುಡುಗಿಯಾದ ನನಗವು ಬೇಕಿರಲಿಲ್ಲ. ನಾನ್ಯಾವತ್ತೂ ಸರಳರೇಖೆಯ ಹಾಗೇ ಇದ್ದವಳು. ನೆಮ್ಮದಿಯ ಶಾಂತ ಜೀವನವನ್ನರಸುತ್ತ ಅಲೆದದ್ದು. ಆದರೆ ಬದುಕು ನನ್ನಷ್ಟು ಸರಳರೇಖೆಯಾಗಿರಲಿಲ್ಲ. ಅದರ ವಕ್ರಗತಿಗಳಿಗೆ ಮತ್ತೆ ಮತ್ತೆ ಬಲಿಯಾಗುವಂತೆ ಮಾಡಿತು. ಮೈಮನಗಳಿಗೆ ಘಾಸಿ ಮಾಡುತ್ತ ನನ್ನನ್ನು ನಲುಗಿಸಿತು.

ಹೊಟ್ಟೆಯ ಮಗ ದೂರವಾದ ಮೇಲೆ ಮನೆ ಭಣಗುಡತೊಡಗಿತು. ಮಧ್ಯಾಹ್ನಗಳೆಲ್ಲ ನೀರಸವಾದವು. ಆತನ ತುಂಟಾಟ ಕಣ್ಮುಂದೆ ತೊನೆದು ಅವೇ ಮತ್ತೆ ಬೇಕೆನಿಸುವವು. ಅವಿಲ್ಲವೆಂದು ತಿಳಿದು ಮನಸ್ಸು ಖಿನ್ನವಾಗುವುದು. ಒಬ್ಬಳೇ ಕೂತು ಕೂತು ನನ್ನ ನೆರಳು ನನ್ನನ್ನೇ ನುಂಗುವಂತೆನಿಸುವುದು. ನನ್ನ ಮನಸ್ಸು ಚೆಂದದ ನೆವದಲ್ಲಿ ಬಂಧಿಸಿದ ಈ ಎಲ್ಲ ಸಂಕೋಲೆಗಳಿಂದ. ತಲೆಚಿಟ್ಟು ಹಿಡಿಸುವ ಏಕಾಂತತೆಯಿಂದ ಬಿಡುಗಡೆ ಬಯಸುತ್ತಿತ್ತು. ಉತ್ಕಟ ಪ್ರೀತಿಯ ದಿಗಂತಗಳನ್ನರಸುತ್ತ ತೊಟ್ಟಬಟ್ಟೆಯಲ್ಲೇ ಓಡಿಹೋಗಬೇಕೆನ್ನುವ ಹುಂಬತನ! ನನ್ನನ್ನೇ ಮರೆಯಿಸಬಲ್ಲ ಉನ್ಮಾದ! ಇವು ನನಗೆ ಬೇಕಿದ್ದುದು.

ನಿನಗೆ ತಿಳಿಯದು ಚೈತ್ರ, ಮೊದಲಿನಿಂದಲೂ ನಾನು ವಿರಾಗಿನಿ. ನನಗೆಂದೂ ವಾಂಛೆ ಕೆರಳಿ ಬೇಕೆನಿಸಲಿಲ್ಲ. ನಾನು ಬಯಸಿದ್ದೆಲ್ಲ ನಂದಾದೀಪದ ಪ್ರಶಾಂತತೆ. ನನಗಾದದ್ದು ಯಾರೋ ಹಚ್ಚಿದ ಬೆಂಕಿಯಲ್ಲಿ ನಾನು ಬೇಯುವಂತಾದ್ದು. ಇದೇನು ವಿಪರ್ಯಾಸವೋ ಏನೋ, ಇವಕ್ಕೆಲ್ಲ ವ್ಯತಿರಿಕ್ತವೆಂಬಂಥ ಕನಸೊಂದು ನನಗೆ ಪದೇ ಪದೇ ಬೀಳುತ್ತಿತ್ತು; ನನಗೆ ಯಾರದೊ ಕರೆಯ ಸಂದೇಶ ಬಂದಿದೆ. ನಾನಲ್ಲಿಗೆ ಬರಿಗಾಲಲ್ಲಿ ಹೋಗುತ್ತಿದ್ದೇನೆ. ಆದರೆ ಆ ಜಾಗ ಮುಟ್ಟುವುದೇ ಇಲ್ಲ. ಗುಹೆ–ಗುಡ್ಡ ಅರಸುತ್ತ ತಿರುಗುವಾಕೆ ಪ್ರಪಾತದಂಚಿನಲ್ಲಿ ಬಂದು ನಿಲ್ಲುತ್ತೇನೆ. ಆ ಕಡೆಯಿಂದ ಕೂಗು ಕೇಳುತ್ತಲೇ ಇದೆ. ಅದಲ್ಲಿಗೆ ಹೋಗಲು ದಾರಿಯಿಲ್ಲ – ಎಚ್ಚರವಾಗಿ ಬಿಡುತ್ತಿದೆ...

ಒಟ್ಟಲ್ಲಿ ಇಷ್ಟು ವರ್ಷ ನನ್ನಲ್ಲೇ ಹುಗಿದಿಟ್ಟ ದುಃಖ ಹೊರಬಂದು ಕಾಡತೊಡಗಿದವು. ನನಗೇನೂ ಗೊತ್ತಾಗುತ್ತಿರಲಿಲ್ಲ. ಗಂಡಸರನ್ನು ನಾನು ಪ್ರೀತಿಸುತ್ತಿರಲಿಲ್ಲವೇ? ಹಾಗೇನೂ ಇರಲಿಲ್ಲ. ಅಪ್ಪನ ಮನೆಗೆ ಹೋಗಬೇಕೆನಿಸಿದರೂ ಅದು ಅಶಕ್ಯವಾಗಿತ್ತು. ನನ್ನ ಕಠೋರ ದಿನ ಗಳಲ್ಲಿಯೇ ಅಪ್ಪನಿಗೆ ಅದರ ಛಳಕು ಕೂಡ ಮುಟ್ಟದ ಹಾಗೆ ಮುಚ್ಚಿಟ್ಟವಳು. ಈಗ ಇಳಿವಯಸ್ಸಿ ನಲ್ಲಿ ಅವರಿಗೆ ಹೊರೆಯಾಗಬಯಸಿರಲಿಲ್ಲ. ಅದೂ – ಕಾರಣವೇ ಅಲ್ಲವೆನ್ನಿಸುವ ಕಾರಣಕ್ಕೆ...

ಇದ್ದಕ್ಕಿದ್ದಹಾಗೆ ಎಲ್ಲ ಬಿಟ್ಟು ಹೀಗೆ ಬಂದಿರುವುದರಿಂದ ಏನಾಗುತ್ತದೊ ನನಗೆ ಗೊತ್ತಿಲ್ಲ. ಆದರೆ ನಿನ್ನನ್ನು ಕಾಣುವ ಕ್ಷಣದವರೆಗೂ ಬದುಕುವ ಆಸೆಯೇ ಬಿಟ್ಟವಳಿಗೆ ಈಗ ಮೊದಲ ಬಾರಿಗೆ ಏನೆಲ್ಲ ಭಾವನೆಗಳುಕ್ಕಿವೆ. ಅದಷ್ಟೇ ನನಗೆ ಗೊತ್ತು.

ನೀನು ನನ್ನ ಮಗನ ಹಾಗೆ, ಗೆಳೆಯನ ಹಾಗೆ. ಇಷ್ಟುವರ್ಷ ಹುಡುಕುತ್ತಿದ್ದ ಚೇತನದ ಹಾಗೆ ಕಂಡೆ.